# ರಣಬೀರ್‌ಗೂ ‘ಒಲ್ಲೆ’ ಎಂದ ಕತ್ರೀನಾ!



ಇನ್ನೇನು ಮದುವೆ ಆಗಿಯೇ ಬಿಟ್ಟರು ಎಂಬಂತೆ ರಣಬೀರ್ ಕಪೂರ್ ಮತ್ತು ಕತ್ರೀನಾ ಕೈಫ್ ತೆಕ್ಕೆ ಹಾಕಿಕೊಂಡು ವಿದೇಶದ ಬೀಚ್‌ಗಳಲ್ಲಿ ಓಡಾಡಿದ್ದರು. ಇಬ್ಬರ ಮನೆಯವರೂ ಒಟ್ಟಿಗೆ ಕುಳಿತು ಬೆಳದಿಂಗಳ ಊಟ ಮಾಡಿದ್ದಾಯಿತು. ಕರೀನಾ ಕಪೂರ್ ‘ಕಾಫಿ ವಿತ್ ಕರಣ್’ ಕಾರ್ಯಕ್ರಮದಲ್ಲಿ ಕತ್ರೀನಾಳನ್ನು ಅತ್ತಿಗೆ ಎಂದು ಕಿಚಾಯಿಸಿದ್ದೂ ಆಯ್ತು. ಇಷ್ಟೆಲ್ಲಾ ಆದ ಮೇಲೂ ಅವರು ಮದುವೆಯಾಗದೇ ಇರುತ್ತಾರೆಯೇ? ಇಬ್ಬರೂ ಹಸೆಮಣೆ ಏರುವ ಗಳಿಗೆಯನ್ನು ಕಾತರದಿಂದ ಕಾಯುತ್ತಿರುವ ಅಭಿಮಾನಿಗಳ ಬಳಗವೂ ದೊಡ್ಡದು.

ಇದರ ನಡುವೆಯೇ ಕತ್ರೀನಾ ಮನೆಯಂಗಳದಿಂದ ಕಹಿ ಸುದ್ದಿಯೊಂದು ಸ್ಫೋಟಿಸಿದೆ. ರಣಬೀರ್ ಕಪೂರ್‌ರ ವಿವಾಹ ಕೋರಿಕೆಯನ್ನು ಕತ್ರೀನಾ ತಿರಸ್ಕರಿಸಿದ್ದಾರಂತೆ. ಇದು ಅಧಿಕೃತವಾಗಿ ದೃಢಪಟ್ಟಿಲ್ಲವಾದರೂ ಸದ್ಯಕ್ಕೆ ಮದುವೆ ಒಲ್ಲೆ ಎಂದು ಕ್ಯಾಟ್ ಹೇಳಿರುವುದು ನಿಜ ಎನ್ನುವುದು ಬಾಲಿವುಡ್ ಪಂಡಿತರ ಮಾತು.

ಹಾಗಂತ ಕತ್ರೀನಾ, ರಣಬೀರ್‌ನನ್ನು ಸಂಪೂರ್ಣವಾಗಿ ತಿರಸ್ಕರಿದ್ದಾರೆ ಎಂದೇನಲ್ಲ. ವೃತ್ತಿಯ ಮೇಲೆ ಹೆಚ್ಚು ಗಮನ ಹರಿಸುವ ಸಲುವಾಗಿ ಮದುವೆ ಬೇಡ ಎಂದಿದ್ದಾರಂತೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಸುದ್ದಿ ಕುರಿತು ತೀವ್ರವಾದ ಚರ್ಚೆಗಳು ನಡೆಯುತ್ತಿವೆ. ‘ಇದು ಸುಳ್ಳಾಗಿರಲಿ ದೇವರೇ’ ಎಂದು ಅಭಿಮಾನಿಗಳು ಪ್ರಾರ್ಥನೆಯ ಮೊರೆ ಹೋಗಿದ್ದರೆ, ಕೆಲವರು ಈ ಜೋಡಿಯ ‘ವ್ಯಾಲಿಡಿಟಿ’ ಹೆಚ್ಚು ಕಾಲವಿಲ್ಲ ಎಂಬ ತಮ್ಮ ಭವಿಷ್ಯವಾಣಿ ನಿಜವಾಗಿದೆ ಎಂದು ಬೀಗುತ್ತಿದ್ದಾರೆ. ಸ್ವತಃ ರಣಬೀರ್ ಈ ಸಂಬಂಧವನ್ನು ಗಂಭೀರವಾಗಿ ಪರಿಗಣಿಸಿದ್ದರು. ಆದರೆ ಇದ್ದಕ್ಕಿದ್ದಂತೆ ಕತ್ರೀನಾ ನಡೆ ಬದಲಿಸಿರುವುದು ಅಚ್ಚರಿ ಮೂಡಿಸಿದೆ.

■ ಅಮಿ

